ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು**

**ಸಂಖ್ಯೆ:ಪಿಯು/ಸಿಬ್ಬಂದಿ/ಸಿಆರ್11/ವಿ.ವಿ/2013ಉಖಾಪೂಸೇ/2017-18** **ದಿನಾಂಕ:19-12-2017.**

## ಜ್ಞಾಪನ

ವಿಷಯ: 2013ನೇ ಸಾಲಿನಲ್ಲಿ ನೇಮಕಗೊಂಡ ಉಪನ್ಯಾಸಕರ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.

ಉಲ್ಲೇಖ: 1. ಪದವಿ ಪೂರ್ವ ಶಿಕ್ಷಣ ಇಲಾಖೆ, ವಿಶೇಷ ನೇಮಕಾತಿ ಅಧಿಸೂಚನೆ: ಪಪೂಶಿಇ/ಸಿಬ್ಬಂದಿ-1 ವಿಶೇಷ ನೇಮಕ 01/2011-12 ದಿನಾಂಕ: 13-4-2012

2. ವಿಶೇಷಾಧಿಕಾರಿಗಳ ಕಚೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು, ಇವರ ಪತ್ರ: ಸಿಎಸಿ 4/ಪಪೂಶಿ/ನೇ/01/2012-13 ದಿ: 13-02-2012

3. ಈ ಕಚೇರಿಯ ಅಧಿಸೂಚನೆ ಸಂಖ್ಯೆ: ಪಪೂಶಿ ಸಿಬ್ಬಂದಿ-2 ವಿಶೇಷ ನೇಮಕ 01/2011-12 (ಭಾಗ-2) ದಿನಾಂಕ: 27-06-2013.

4. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಇವರು ಸಲ್ಲಿಸಿರುವ ಪ್ರಸ್ತಾವನೆಗಳ ಮೇರೆಗೆ.

-*-

ಪ್ರಸ್ತಾವನೆ:

2013ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ವಿಶೇಷಾಧಿಕಾರಿಗಳ ಕಚೇರಿ, ಕೇಂದ್ರೀಕೃತ ದಾಖಲಾತಿ ಘಟಕದಿಂದ ನೇಮಕಾತಿ ಹೊಂದಿ, ಉಲ್ಲೇಖ: 3ರ ಆದೇಶದಂತೆ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಉಪನ್ಯಾಸಕರು, ನಾಲ್ಕು ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ಶಿಫಾರಸ್ಸಿನೊಂದಿಗೆ ಸಲ್ಲಿಸಲಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಆದೇಶ:

ಈ ಕೆಳಕಂಡ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಹೆಸರಿನ ಮುಂದೆ ವಿವರಿಸಿದಂತೆ ನಾಲ್ಕು ವರ್ಷಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವ ಪ್ರಯುಕ್ತ ಸದರಿಯವರ ಪರಿವೀಕ್ಷಣಾ ಅವಧಿಯನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರ ಶಿಫಾರಸ್ಸಿನ ಮೇರೆಗೆ ಕರ್ನಾಟಕ ನಾಗರಿಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5 (1) (ಎ) ಅನ್ವಯ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಲಾಗಿದೆ. ಈ ಮಾಹಿತಿಯನ್ನು ಸಂಬಂಧಪಟ್ಟ ಉಪನ್ಯಾಸಕರ ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವಂತೆ ಸಂಬಂಧಪಟ್ಟ ಕಾಲೇಜು ಪ್ರಾಂಶುಪಾಲರಿಗೆ ತಿಳಿಸಿದೆ.

| ಕ್ರ. ಸಂ. | ಹೆಸರು/ಪದನಾಮ/ವಿಳಾಸ | ಕರ್ತವ್ಯಕ್ಕೆ ಹಾಜರಾದ ದಿನಾಂಕ | ಖಾಯಂ ಪೂರ್ವ ಸೇವೆ ಪೂರೈಸಿದ ದಿನಾಂಕ | ಪರಿವೀಕ್ಷಣಾ ಅವಧಿ ತೃಪ್ತಿಕರವೆಂದು ಘೋಷಿಸಿದ ದಿನಾಂಕ: |
|---|---|---|---|---|
| 1 | 2 | 3 | 4 | 5 |
| 01 | ಶ್ರೀಮತಿ ಶೈಲಜಾ ಡಿ.ಪಿ<br>ಗಣಿತಶಾಸ್ತ್ರ ಉಪನ್ಯಾಸಕರು,<br>ಸರ್ಕಾರಿ ಪದವಿ ಪೂರ್ವ ಕಾಲೇಜು,ನಾಪೋಕ್ಲು, ಕೊಡಗು ಜಿಲ್ಲೆ | 29-06-2013 | 28-06-2017 | 26-07-2017 |

**(ವೇತನ ರಹಿತ ರಜೆಯಿಂದ ಪರಿವೀಕ್ಷಣಾ ಅವಧಿಯನ್ನು ಮುಂದೂಡಿದೆ)**

ನಿರ್ದೇಶಕರು 19/12

ಪದವಿ ಪೂರ್ವ ಶಿಕ್ಷಣ ಇಲಾಖೆ.

<u>ಪ್ರತಿಗಳು</u>:–

1. ಮಹಾಲೇಖಪಾಲರು (ಎ&ಇ)–ಕರ್ನಾಟಕ, ಪಾರ್ಕ್‌ಹೌಸ್, ಬೆಂಗಳೂರು.
2. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕೊಡಗು ಜಿಲ್ಲೆ.
3. ಸಹಾಯಕ ನಿರ್ದೇಶಕರು, ಇ–ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು –ಇವರಿಗೆ ಅಂತರ್ಜಾಲದಲ್ಲಿ ಅಳವಡಿಸಲು.
4. ಸಂಬಂಧಿಸಿದ ಪ್ರಾಂಶುಪಾಲರುಗಳಿಗೆ– **<u>ಉಪನ್ಯಾಸಕರುಗಳ ಮೂಲ ಸೇವಾ ಪುಸ್ತಕಗಳೊಂದಿಗೆ</u>**–ಮುಂದಿನ ಕ್ರಮಕ್ಕಾಗಿ.
5. ಸಂಬಂಧಿಸಿದ ಉಪನ್ಯಾಸಕರುಗಳಿಗೆ–ಪ್ರಾಂಶುಪಾಲರ ಮೂಲಕ.
6. ಕಛೇರಿ ಪ್ರತಿ.